ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿಃ 23.07.2026

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ವಕೀಲರಿಂದಃ

ನಾವು ಪ್ರತಿವಾದಿಗೆ ಜಮೀನನ್ನು ಆಧಾರವನ್ನಾಗಿಸಿ ಮಾಡಿಕೊಂಡು ಅದರಂತೆ ಸಾಲವನ್ನು ನೀಡಿರುತ್ತೇವೆ. ಆಧಾರವಾಗಿ ಮಾಡಿದ ಜಮೀನು ಪ್ರತಿವಾದಿ-1 ರವರ ಹೆಸರಿನಲ್ಲಿತ್ತು. ಆಗ ಅದರ ಮಾರುಕಟೆ ಬೆಲೆ ಎಷ್ಟು ಎಂಬುದು ಗೊತ್ತಿಲ್ಲ. ನಾವು ರೂ. 5 ಲಕ್ಷ ಸಾಲವನ್ನು ಪ್ರತಿವಾದಿಗಳಿಗೆ ಕೊಟ್ಟಿದ್ದೇವೆ. ಸಾಲ ಪಡೆದ ಮೇಲೆ ಪ್ರತಿವಾದಿ-1 ರವರು ಕಂತಿನ ಪ್ರಕಾರ ಹಣವನ್ನು ಕಟ್ಟುತಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಗಳು ಪಡೆದಿರುವ ರೂ. 5 ಲಕ್ಷ ಹಣವನ್ನು ಈಗಲೂ ಕೊಡಲು ತಯಾರಿದ್ದಾರೆ ಎಂದರೆ ಅದರ ಬಡ್ಡಿಯನ್ನು ಸಹ ಕಟ್ಟಬೇಕಾಗಿದೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಸ್ವಲ್ಪ ಹಣವನ್ನು ಈಗಾಗಲೇ ಕಟ್ಟಿದ್ದು ಅದನ್ನು ಹೊರತು ಪಡಿಸಿ ರೂ. 5 ಲಕ್ಷ ಹಣವನ್ನು ಕಟ್ಟಲು ತಯಾರಿದ್ದಾರೆ ಎಂದರೆ ಸಾಕ್ಷಿ ಅವರು ಯಾವುದೇ ಹಣವನ್ನು ಕಟ್ಟಿಲ್ಲ ಎಂದು ನುಡಿಯುತ್ತಾರೆ.

ಮರು ವಿಚಾರಣೆಃ ಇಲ್ಲಃ

**(**ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**)**

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.